**Total No. of Pages : 3**

Register Number :

**5013**

Name of the Candidate :

**B.A./B.Sc./B.Music/B.Dance DEGREE EXAMINATION**
**DECEMBER 2014.**

**(KANNADA)**

**(SECOND YEAR)**

**(PART I)**

**617 — PROSE AND DRAMA**

**(Candidates joined during 2009–10)**

Time : Three hours | Maximum : 100 marks

---

## SECTION A

ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ. **(4 × 15 = 60)**

ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.

1. (a) ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಾಸ್ತವಿಕ ನಾಟಕದ ಪರಂಪರೆಯ ಬಗ್ಗೆ ವಿಶದಪಡಿಸಿರಿ.

ಅಥವಾ

(b) ನಾಟಕದ ಮೂಲಕ ಭಾಷೆಯನ್ನು ಹೇಗೆ ಜೀವಂತವಾಗಿಡಬಹುದು?

2. (a) ಚಂಪೂ ಗ್ರಂಥಗಳಲ್ಲಿ ಬಳಸಿದ ಗದ್ಯ ಬೆಳೆದು ಬಂದ ರೀತಿಯನ್ನು ವಿವರಿಸಿರಿ.

ಅಥವಾ

(b) ಜನಪದ ಸಾಹಿತ್ಯವು ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸೊಂಪಾಗಿ ಹೇಗೆ ಬೆಳೆಸಿದೆ?

3. (a) 'ಬೆರಳ್ಗೆ ಕೊರಳ್' ನಾಟಕದಲ್ಲಿ ಕರ್ಮದ ದೃಶ್ಯ ಹೇಗೆ ಮೂಡಿ ಬಂದಿದೆ?

ಅಥವಾ

(b) 'ಬೆರಳ್ಗೆ ಕೊರಳ್' – ಶೀರ್ಷಿಕೆಯ ಔಚಿತ್ಯವನ್ನು ವಿವರಿಸಿರಿ.

4. (a) ಮೂಡಗೇರಿಯಲ್ಲಿ ಯಾವುದೇ ಅನಾಹುತವಾದರೂ ಕೃಷ್ಣೇಗೌಡರ ಆನೆಯೇ ಕಾರಣ ಹೇಗೆಂದು ವಿವರಿಸಿರಿ.

ಅಥವಾ

(b) 'ರಹಸ್ಯ ವಿಶ್ವ'ದಲ್ಲಿ ಬರುವ 'ಸಣ್ಣ ಬಾಲಕ'ನ ಪಾತ್ರವನ್ನು ಪರಿಚಯಿಸಿರಿ.

## SECTION B

ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸಂದರ್ಭ ಸಹಿತ ಉತ್ತರಿಸಿರಿ.

**(4 × 5 = 20)**

ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.

5. "ಸಮರ್ಪಿಸುವೆನೆನ್ನ ಸರ್ವಸ್ವಮಂ ನಿನ್ನಡಿಗೆ ಗುರುದೇವ...."

6. "ಆರ್ಗೋ ಬಲಿ ನನ್ನ ಕಂದನ ಬೆರಳ್

ಬಲಿಯಕ್ಕೆ ಆ ಪಾಪಿಯ ಕೊರಳ್"

7. "ಅಪರಾಧಮಿಲ್ಲದಾ ಸಾಧುವಂ ಕೊಲಲ್ಕಲ್ತು

ಆಚಾರ್ಯ, ಈ ವಿದ್ಯೆಯಂ ನೀನಿತ್ತುದೆನಗೆ

ಮುಗಿಗುಂ ಮಂತ್ರಾಧಿದೇವತೆ"

8. "ನಿಮ್ಮ ವೇಷಾನೇ ಹಾಕಿಕೊಂಡು ನನ್ನೆದುರು ಬಂದರೆ!"

9. "ಹೀಂಗಾ ಮಾಡೋದೂ? ಈ ಚಿಕ್ಕುಡಗನ್ನ ಕೂಡಿಸಿ ಇಳಿಜಾರಿನಲ್ಲಿ ಬಿಟ್ಟಿಡೋದಾ ಸೈಕಲ್ನಾ?"

10. "ನಮ್ಮ ತಿಪ್ಪಾರಳ್ಳಿ ಬಲು ದೂರ, ನಡಿಯಾಕೆ ಬಲು ದೂರ"

11. "ಏನಹಂಕಾರವ್ರೋ ಈ ಕ್ಷತ್ರಿಯರ ಮಕ್ಕಳ್ಗೆ".

## SECTION C

ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.

**(5 × 2 = 10)**

ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.

12. ಗಗನ ಪಕ್ಷಿಯನ್ನು ಕೆಡಹಲು ದ್ರೋಣನು ಏಕಲವ್ಯನಿಗೆ ಹೇಳಿದಾಗ ಅವನು ಏಕೆ ನಿರಾಕರಿಸಿದನು?

13. ಸ್ಮಶಾನದಿಂದ ಊರಿಗೆ ಹಿಂತಿರುಗುವಾಗ ಷಾ ಹಗೂ ನಿರೂಪಕನನ್ನು ಹಿಂಬಾಲಿಸಿದ್ದೇನು? ಅವರು ಅದನ್ನೇನೆಂದು ಕರೆದರು? ಯಾಕೆ?

14. "ಕಿರಗೂರಿನ ಗಯ್ಯಾಳಿಗಳು" ನಾಟಕದಲ್ಲಿ ಮೂಡಿ ಬರುವ ಸಂಕೇತಗಳು ಯಾವುವು?

15. "ಎಪಿಕ್ ಥಿಯೇಟರ್" ಎಂದರೇನು?

16. "ನಮ್ ಕಂಪ್ನಿ" ನಾಟಕದಲ್ಲಿ ಕೈಲಾಸಂರವರು ನಾಟಕವನ್ನು ಕುರಿತು ಹೇಗೆ ಟೀಕಿಸಿದ್ದಾರೆ?

17. ಬಸವಪ್ಪ ಶಾಸ್ತ್ರಿಗಳ "ಕನ್ನಡ ಶಾಕುಂತಲ" ಒಂದು ಚಿರಂತನ ಕೃತಿ, ಹೇಗೆ?

18. ಶ್ರೀನಿವಾಸರು "ಯಶೋಧರಾ" ನಾಟಕವನ್ನು ಯಾವ ವಿಷಯವನ್ನು ತೆಗೆದುಕೊಂಡು ರಚಿಸಿದ್ದಾರೆ?

## SECTION D

ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ. **(5 × 2 = 10)**

ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.

19. "ರಹಸ್ಯ ವಿಶ್ವ"ದಲ್ಲಿ ತೇಜಸ್ವಿಯವರು ಬಳಸಿದ ಭಾಷೆ

20. ದಾನಮ್ಮನ ಪಾತ್ರ ಪರಿಚಯ

21. ಅಭಿವ್ಯಕ್ತಿ ಪಂಥದ ನಾಟಕ

22. ಗುಬ್ಬಿ ವೀರಣ್ಣ

23. ಏಕಾಂಕ ನಾಟಕ

24. ರಂಗ ಸಂಗೀತ

25. ಏಕಲವ್ಯ ನಾಟಕದಲ್ಲಿ ಅರ್ಜುನನ ಪಾತ್ರ.